ನಮ್ಮ ರಾಜ್ಯಕ್ಕೆ ಬಂದಿದೆ ಅಂತ ಇಟ್ಟುಕೊಂಡರೂ ಕೂಡ ಒಂದೊಂದು ಮನೆಗೆ 5-6 ಸಾವಿರ ರೂಪಾಯಿ ಖರ್ಚು ಮಾಡಿದರೆ ಬಹಳ ಮನೆ ಕಟ್ಟುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಒಂದೊ ಮನೆಗೆ 2 ಸಾವಿರ ರೂಪಾಯಿ ಅಂತ ಗೊತ್ತು ಮಾಡಿದೆ. ಈ ಒಂದು ಬಡತನದಲ್ಲಿ ಜೀವನ ಮಾಡ ತಕ್ಕಂಥಾವರಿಗೆ 2 ಸಾವಿರ ರೂಪಾಯಿನಲ್ಲಿ ಏನು ಒಂದು ಮನೆ ಕಟ್ಟುತ್ತೇವೋ ಅದು ಅವರಿಗೆ ಹೋಲಿಸಿದರೆ ಇದು ಉತ್ತಮವಾಗಿದೆ ಎಂದು ಹೇಳಬಹುದು. ಆದುದರಿಂದ ಅದಕ್ಕಾಗಿ ಹೆಚ್ಚು ದುಡ್ಡು ಖರ್ಚು ಮಾಡಬಾರದು ಎನ್ನುವ ವಿಚಾರ ಇದೆ. ಅಲ್ಲದೆ ಒಂದೊಂದು ತಾಲ್ಲೂಕಿಗೆ 100-200 ಮನೆಗಳನ್ನು ಕಟ್ಟೋಣ, ಅವರು ಅದನ್ನು ರಿಪೇರಿ ಮಾಡಿ ಇಟ್ಟುಕೊಳ್ಳುತ್ತಾರೆ. ಅವರು ಅರ್ಬನ್ ಸ್ಟ್ಯಾಂಡರ್ಡ್‌ನ್ನು ಅಪ್ಲೈ ಮಾಡಬೇಕು ಎಂದರೆ ರೂರಲ್ ಕಂಡಿಷನ್ ಪ್ರಕಾರ ಅದು ಆಗುವುದಿಲ್ಲ. ಅಲ್ಲದೆ ಅವರು ಆ ಸಾಲವನ್ನು ಕೊಡುವುದಕ್ಕಾಗುವುದಿಲ್ಲ. This is what we had done and it is consistnts with the poverty in rural India. In dealing with these problems we should not be petturbed by urban standards of construction.

SRI B. BASAVALINGAPPA.—May I know whether the Hon. Minister would speed up this scheme so that atleast 1/5 or 1/8 of the population could be covered each year ?

SRI M.Y. GHORPADE.—This is a good point. It is a fact the rate at which we have been completing these houses has gone on increasing. The tempo has now picked up because the Deputy Commissioners, the B.D.Os and the people have get used to this scheme. There is no doubt the number of houses we will be completing each year would be much larger than the number during previous years. The very fact we would be completing something like 20 to 30 thousand houses by the end of this year, which would be an average of about 10 crores of houses per annum taking three years together is itself a great achievement. I am sure this could be improved further in the years to come.

Hostel Buildings for Pre-matric SC/ST Students

135 SRI K. SIDDAIAH (Santhemarahally) :—Will the Minister for Rural Development and Social Welfare be pleased to state :—

(a) the policy and procedure being followed by Government in constructing Hostel building for Pre-matric students belonging to Scheduled Castes/Scheduled Tribes.

(b) the number of College Hostels and Hostels for Prematric students for Scheduled Castes/Scheduled Tribes proposed to be constructed and the number of hostels built during 1974-75 ?

SRI N. RACHAIAH (Minister for Rural Development and Social Welfare)

(a) It is the policy of Government to construct hostel buildings wherever Government hostels located at present in rented buildings. The procedure is that buildings be provided to such places where the site is provided free of cost and the extra expenditure, over and above the Government grant is borne by the concerned Taluk Development Board.

(b) College Hostels		Hostels for Pre-matric Students.	
Proposed—	3	Proposed —	60
Completed by 1974-75—	1	Completed by 1974-75—	15

ಶ್ರೀ ಕೆ. ಸಿದ್ದಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ ಈಗ ಬಾಡಿಗೆ ಕಟ್ಟಡಗಳಲ್ಲಿ ಸರ್ಕಾರೀ ವಿದ್ಯಾರ್ಥಿನಿಲಯಗಳಿರುವ ಕಡೆಗಳಲ್ಲೆಲ್ಲ ವಿದ್ಯಾರ್ಥಿನಿಲಯದ ಕಟ್ಟಡಗಳನ್ನು ನಿರ್ಮಿಸುವುದು ಸರ್ಕಾರದವರ ಕಾರ್ಯನೀತಿಯಾಗಿದೆ ಎಂದು ಹೇಳಿದ್ದೀರಿ. ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆ ಎರಡೂ ಇರುವ ಕಡೆ ವಿದ್ಯಾರ್ಥಿನಿಲಯವನ್ನು ಕಟ್ಟಿಸುವುದಕ್ಕೆ ಏನು ಒಂದು ಪಾಲಸಿ ಇಟ್ಟು ಕೊಂಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಎಲ್ಲ ಹೈಸ್ಕೂಲುಗಳು ಇವೆ ಅಂದರೆ ಕೆಲವು ಕಡೆಗಳಲ್ಲಿ ಶಾಲೆಗಳಲ್ಲಿ ಮಾಧ್ಯಮಿಕ ಶಾಲೆಗಳು ಇರುತ್ತವೆ. ಅಂಥಾ ಕಡೆ ಮೊದಲು ಅಧ್ಯತೆ ಕೊಡುತ್ತೇವೆ ಏತಕ್ಕೆಂದರೆ ಅಲ್ಲಿ ಹುಡುಗರು ಹೆಚ್ಚಿಗೆ ಇರುತ್ತಾರೆ. ಇನ್ನು ಕೆಲವು ಕಡೆ ಮಾಧ್ಯಮಿಕ ಶಾಲೆಗಳಲ್ಲಿ ಹೆಚ್ಚಿಗೆ ಹುಡುಗರು ಇದ್ದರೆ ಅದಕ್ಕೂ ಕೂಡ ಟಾಪ್ ಕ್ರಯಾರಿಟಿ ಬೇಸಿಸ್ ಮೇಲೆ ಕೊಡುತ್ತೇನೆ.

ಶ್ರೀ ಕೆ. ಸಿದ್ದಯ್ಯ—ಇದಕ್ಕಾಗಿ ಎಷ್ಟೋ ಜನ ಸೈಟುಗಳನ್ನು ಕೊಡುವುದಕ್ಕೆ ಮುಂದೆ ಬರುತ್ತಾರೆ. ಮತ್ತು ತಾಲ್ಲೂಕ್ ಬೋರ್ಡ್‌ನವರೂ ಕೂಡ ಅವರು ಕೊಡಬೇಕಾದ ಷೇರು ಕೊಟ್ಟರೆ ಹಾಸ್ಟೆಲುಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿದ್ದೀರಿ. ಇದರಲ್ಲಿ ಅನೇಕ ಕಡೆ ಹಾಸ್ಟಲ್ ಇದ್ದರೂ ಕೂಡ ತಾಲ್ಲೂಕ್ ಬೋರ್ಡ್‌ನವರು ಸೈಟು ಕೊಟ್ಟು, ಷೇರ್ ಕೂಡ ಕೊಟ್ಟಿದ್ದರೆ ಆ ಕಲಸಗಳೂ ಬಹಳ ವರ್ಷದಿಂದ ಪೆಂಡಿಂಗ್ ಇವೆಯಲ್ಲಾ ಅದಕ್ಕೆ ಕಾರಣ ಏನು ?

ಶ್ರೀ ಎನ್. ರಾಚಯ್ಯ—ಪಿ.ಡಬ್ಲ್ಯೂ.ಡಿ.ಯವರು ಇದರ ಒಂದು ಎಸ್ಟಿಮೇಟನ್ನು ಮಾಡಿ ಕಳುಹಿಸುತ್ತಾರೆ. ಸರ್ಕಾರದ ಬಾಬ್ತು ನಾವು ಷೇರುಗಳನ್ನು ಕೊಡುವಾಗ ತಾಲ್ಲೂಕು ಬೋರ್ಡ್‌ನವರು ಕೆಲವು ಸಂದರ್ಭದಲ್ಲಿ ಹಣ ಇಲ್ಲದೆ ಇದ್ದಾಗ ಅವರು ಕೊಡಬೇಕಾದ 100ಕ್ಕೆ 25 ಭಾಗ ಹಣ ಏನು ಇದೆ ಅದು ಕೊಡುವುದಿಲ್ಲ. ಅದುದರಿಂದ ಆ ಕೆಲಸ ತಡವಾಗುತ್ತದೆ. ಅದಕ್ಕೆ ಪುನಃ ಎಸ್ಟಿಮೇಟನ್ನು ರಿಮೈಸ್ ಮಾಡಿದರೆ ಹಣ ಹೆಚ್ಚು ಖರ್ಚಾಗುತ್ತದೆ. ಈ ವಿಷಯವೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಈ ಒಂದು ಕಾರಣದಿಂದಲೂ ಕೆಲಸ ನಿಧಾನವಾಗಿದೆ. ಆದುದರಿಂದ ಈಗಾಗಲೇ ನಾನು ಸಂಬಂಧಪಟ್ಟ ಪಿ.ಡಬ್ಲ್ಯೂ.ಡಿ. ಸೆಕ್ರೆಟರಿ ಮತ್ತು ಫೈನಾನ್ಸ್ ಸೆಕ್ರೆಟರಿ ಎಲ್ಲರನ್ನೂ ಕರೆಸಿ ಹಿಂದೆ ಅಂದರೆ 1962ನೇ ಇಷವಿಯಲ್ಲಿ ಈ ಬಗ್ಗೆ ಏನು ಒಂದು ಪಾಲಸಿ ಇತ್ತೋ ಅದೇ ರೀತಿಯಿಲ್ಲಿ ಹರಿಜನ ಮತ್ತು ಗಿರಿಜನ ಮಕ್ಕಳಿಗೆ ಸರ್ಕಾರವೇ ನೇರವಾಗಿ 100ಕ್ಕೆ 100 ಭಾಗ ಹಣ ಹಾಕಿ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು ಎನ್ನುವ ಒಂದು ತಿರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ಸರ್ಕಾರದ ಯೋಚನೆಯಲ್ಲಿದೆ. ಈ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ. ಎಂ. ಮುಂಜುನಾಥ.—ತಾವು ಹಾಸ್ಟಲುಗಳನ್ನು ಕಟ್ಟಿಸಿತಕ್ಕಂಥಾ ವಿಚಾರದಲ್ಲಿ ಇಡೀ ದೇಶಾದ್ಯಾಂತ 60 ಹಾಸ್ಟಲುಗಳನ್ನು ಕಟ್ಟಬೇಕೆಂದು ಯೋಜನೆ ಹಾಕಿಕೊಂಡಿದ್ದೀರಿ. ಎಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇರುತ್ತಾರೋ ಅಲ್ಲಿಗೆ ಮೊದಲು ಅದ್ಯತೆ ಕೊಡಬೇಕು ಅಂತ ಇದೆ. ಈ ಬಗ್ಗೆ ತಮಗೆ ಒಂದು ನಿದರ್ಶನ ಕೊಡುತ್ತೇನೆ. ತಿಪಟೂರಿನಿಂದ ಅನೇಕ

ಬಾರಿ ಇದಕ್ಕೆ ಒಂದು ಪ್ರಪೋಸಲ್ ಬಂದಿದೆ. ತಾಲ್ಲೂಕ್ ಬೋರ್ಡ್‌ನವರಿಂದಲೂ ಕೂಡ ತಮ್ಮ ವಂತಿಗೆ ತೆಗೆದುಕೊಳ್ಳಬಹುದಾಗಿತ್ತು. ಈ ಬಗ್ಗೆ ಅನೇಕ ಅರ್ಜಿಗಳೂ ಬಂದಿವೆ. ಅಂಥಾ ನನ್ನೆ ವೇಶದಲ್ಲೂ ಕೂಡ ಆ ಕೆಲಸವನ್ನು ಏಳಂಬ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಏನು ?

ಶ್ರೀ ಎನ್. ರಾಚಯ್ಯ.—ನಾನು ತಾಲ್ಲೂಕ್ ಅಭಿವೃದ್ಧಿ ಮಂಡಲಗಳಿಗೆ ಸೇರಿದ ಸಚಿವನಾಗಿರಬಹುದು, ಆದರೆ ನಿಮ್ಮಂತಹವರು ಅಂದರೆ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿರುವವರು ಈ ಬಗ್ಗೆ ನಿರ್ಣಯ ಮಾಡಿ ಕಳುಹಿಸಿಕೊಡದಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಈ ಕಾರಣದಿಂದಲೇ ಕೆಲವು ಕಡೆಗಳಲ್ಲಿ ಇಂತಹ ಅವ್ಯವಹಾರಗಳಾಗಿರುವುದು, ಇದನ್ನು ತಪ್ಪಿಸಲು ಇನ್ನು ಮುಂದೆ ಸರ್ಕಾರದವರೇ ಈ ಬಾಬಿಗೆ ಶೇಕಡಾ ನೂರರಷ್ಟು ಖರ್ಚನ್ನು ಕೊಡಬೇಕೆಂಬ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿದ್ದೇವೆ. ಈ ದಿಶೆಯಲ್ಲಿ ಈಗಾಗಲೇ ಸೂಕ್ತ ಕಾರ್ಯಕ್ರಮ ಕೈಕೊಂಡಿದ್ದೇವೆ.

ಶ್ರೀ ಟಿ.ಎಂ. ಮಂಜುನಾಥ.—ಮಾನ್ಯ ಮಂತ್ರಿಗಳು ನನ್ನ ಮೇಲೆ ಆರೋಪಮಾಡಿದ್ದಾರೆ.

ಶ್ರೀ ಎನ್. ರಾಚಯ.—ನೀವು ಎಂದರೆ ಖಾನಗಿಯವರು ಎಂದು ಅರ್ಥಅಲ್ಲ ಕೆಲಸ ಮಾಡುವವರು ಒಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡದಿದ್ದರೆ ನಾವು ಏನೂ ಮಾಡುವುದಕ್ಕಾಗುವುಕ್ಕಾಗುವುದಿಲ್ಲ.

ಶ್ರೀ ಎಂ.ಎಡ್. ಜಯಪ್ರಕಾಶನಾರಾಯಣ.—ಈಗಿನ ನಿಯಮಾವಳಿಯ ಪ್ರಕಾರ ತಾಲ್ಲೂಕ್ ಮಟ್ಟದಲ್ಲಿ 50 ಸಾವಿರ ರೂಪಾಯಿಗಳವರೆಗೆ ಮತ್ತು ಜಿಲ್ಲಾಮಟ್ಟದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಈ ಕಟ್ಟಡಗಳಿಗಾಗಿ ಖರ್ಚು ಮಾಡಲು ಅವಕಾಶವಿದೆ. ಈ ಒಂದು ನೀಲಿಂಗನ್ನು ತೆಗೆದು ಎಲ್ಲಿ ಹರಿಜನ ಮತ್ತು ಗಿರಿಜನ ಮಕ್ಕಳು ಜಾಸ್ತಿ ಇದ್ದರೋ ಅಂತಹ ಕಡೆಗಳಲ್ಲಿ ಹೆಚ್ಚು ಹೆಚ್ಚು ಹಣ ಖರ್ಚು ಮಾಡಿ ಹೆಚ್ಚಿನ ಕಟ್ಟಡಗಳನ್ನು ಕಟ್ಟಿಸಲು ಏರ್ಪಾಡು ಮಾಡುತ್ತೀರ ?

ಶ್ರೀ ಎಸ್. ರಾಚಯ್ಯ.—ನಾನು ಎರಡನೇ ಸಲ ಸಚಿವನಾಗುವುದಕ್ಕೆ ಮೊದಲು ಈ ಒಂದು ಆಜ್ಞೆಯನ್ನು ಮಾಡಲಾಗಿದೆ. ಇದನ್ನು ಈಗ ಬದಲಾವಣೆ ಮಾಡಬೇಕೆಂದಿದ್ದೇನೆ. ಇನ್ನು ಮುಂದೆ ಎಲ್ಲೆ ಹರಿಜನ ಮತ್ತು ಗಿರಿಜನ ಮಕ್ಕಳು ಜಾಸ್ತಿ ಇದ್ದರೋ ಅಂತಹ ಕಡೆಗಳಲ್ಲಿ ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಕಟ್ಟಡಗಳನ್ನು ಕಟ್ಟಿಸಲು ಗ್ರಾಂಟನ್ನು ಮಂಜೂರು ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ಹಾಲಿ ಇರತಕ್ಕಂಥ ಕಟ್ಟಡಗಳಿಗೆ ರಿಪೇರಿಯಾಗದೆ ಅವುಗಳ ಶಿಥಿಲವಾಗುತ್ತಿದೆ, ಅವುಗಳನ್ನು ರಿಪೇರಿ ಮಾಡಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಈಗ ಲೋಕೋಪಯೋಗಿ ಇಲಾಖೆಯವರು ವಾರ್ಷಿಕ ರಿಪೇರಿ ಎಂದು ಮಾಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುವ ಪ್ರಕಾರ ಎಲ್ಲಿಯಾದರೂ ರಿಪೇರಿಯಾಗದಿದ್ದರೆ ಅದನ್ನು ನನಗೆ ತಿಳಿಸಿದರೆ, ನಾನು ಆ ಇಲಾಖೆಗೆ ಜಾಗ್ರತೆ ರಿಪೇರಿ ಮಾಡಿಸುವಂತೆ ತಿಳಿಸುತ್ತೇನೆ.

ಶ್ರೀ ಟಿ. ತಾರೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ಹೈಸ್ಕೂಲು ಮತ್ತು ಮಾಧ್ಯಮಿಕ ಶಾಲೆಗಳು ಇರುವ ಕಡೆಗಳಲ್ಲಿ ಖಾಸಗಿಯವರಾಗಲೀ, ಪಂಚಾಯತಿಯವರಾಗಲೀ ಉಚಿತವಾಗಿ ಜಾಗವನ್ನು ಕೊಟ್ಟರೆ ಅಂತಹ ಕಡೆಗಳಲ್ಲಿ ವಿದ್ಯಾರ್ಥಿನಿಲಯದ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಉಚಿತವಾಗಿ ಯಾರಾದರು ಜಾಗಕೊಟ್ಟರೆ ಅಥವಾ ಸರ್ಕಾರದ ಜಾಗವಿದ್ದರೆ ಅಂತಹ ಕಡೆಗಳಲ್ಲಿ ಕಟ್ಟಿಸುತ್ತೇವೆ. ಇವೆರಡೂ ಸಾಧ್ಯವಾಗದಿದ್ದ ಕಡೆಗಳಲ್ಲಿ ಖಾನಗಿಯವರ ಜಾಗವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ.—ತಾವು ಈಗ ತಾನೇ ಉತ್ತರ ಕೊಡುವಾಗ ತಾಲ್ಲೂಕು ಮಂಡಲಿಯಲ್ಲಿರುವ ಖಾಸಗಿಯವರು ನಿರ್ಣಯಮಾಡಿ ಹಣ ಕೊಡದ ಕಾರಣ ಕೆಲವು ಕಡೆಗಳಲ್ಲಿ ಈ ಕಟ್ಟಡಗಳನ್ನು ಕಟ್ಟಿಸಲು ಸಾಧ್ಯವಾಗಿಲ್ಲವೆಂದು ಹೇಳಿದಿರಿ ಆದರೆ ನಮ್ಮ ಕ್ಷೇತ್ರದ ಒಂದು ತಾಲ್ಲೂಕ್

ಮಂಡಲಿಯವರು ಎರಡು ವರ್ಷದ ಹಿಂದೆ ಒಂದು ನಿರ್ಣಯ ಮಾಡಿ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೂ ಆಯಿತು, ಆದರೆ ಇಲ್ಲಿಯವರೆಗೆ ಒಂದು ಕಾಸಿನ ಕೆಲಸವೂ ಆಗದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ರಾಚಯ್ಯ.—ಈಗ ಲೊಕೋಪಯೋಗಿ ಇಲಾಖೆಯಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಕೊಡಬೇಕಾದರೆ ಒಬ್ಬೊಬ್ಬ ಅಧಿಕಾರಿಗೆ ಇಷ್ಟಿಷ್ಟು ಪವರ್ ಎಂದು ಕೊಟ್ಟಿರುತ್ತಾರೆ ಅದಕ್ಕಿಂತ ಜಾಸ್ತಿ ಅಂದರೆ ರಿವೈಸ್ಡ್-ಎಸ್ಟಿಮೇಟಿನಲ್ಲಿ ಒಂದು ರೂಪಾಯಿ ಹೆಚ್ಚಾಗಿದ್ದರೂ ಸಹ ಅವರು ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟು ಟೆಂಡರ್ ಕರೆಯುವುದಕ್ಕೆ ಸಾಧ್ಯವಾಗುವುದಿಲ್ಲ, ಆಗ ಪುನಃ ಸರ್ಕಾರದ ಅನುಮತಿಯನ್ನು ಅವರು ಪಡೆಯಬೇಕಾಗುತ್ತದೆ. ಈ ಕಾರಣದಿಂದ ಕೆಲಸವಾಗುವುದು ನಿಧಾನವಾಗುತ್ತದೆ. ಕೆಲಸ ನಿಧಾನವಾದರೆ ರಿವೈಸ್ಡ್ ಎಸ್ಟಿಮೇಟ್ ಮಾಡಬೇಕಾಗುತ್ತದೆ. ಮಾನ್ಯ ಬೈರೇಗಾಡರು ಎಲ್ಲಿ ಕೆಲಸ ನಿಧಾನವಾಗಿದೆ ಎಂಬುದನ್ನು ತಿಳಿಸಿದರೆ ಆದರ ಬಗ್ಗೆ ನಾವು ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಕೆ. ಸಿದ್ದಯ್ಯ.—ಮೂರು ಕಾಲೇಜು ವಿದ್ಯಾರ್ಥಿನಿಲಯಗಳ ಪೈಕಿ ಒಂದು ಮತ್ತು ಅರವತ್ತು ಪೂರ್ವ ಮೆಟ್ರಿಕ್ ವಿದ್ಯಾರ್ಥಿನಿಲಯಗಳ ಪೈಕಿ 15ನ್ನು ಪೂರ್ತಿಗೊಳಿಸಲಾಗಿದೆ ಎಂದು ಇಲ್ಲಿ ತಿಳಿಸಿದ್ದೀರಿ, 1975-76ರಲ್ಲಿ ಎಷ್ಟು ಹಾಸ್ಟಲ್‌ಗಳನ್ನು ಪೂರ್ತಿ ಮಾಡಲಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ.— ಬಹುಭಾಗ ಪೂರ್ಣವಾಗುತ್ತಿವೆ ಎಂದು ನಮಗೆ ವರದಿ ಬಂದಿದೆ. ಈ ಕಟ್ಟಡಗಳನ್ನು ಕಟ್ಟಿ ಮುಗಿಸಲು 16 ಲಕ್ಷ ರೂಪಾಯಿಗಳು ಬೇಕೆಂದು ಅವರು ಸರ್ಕಾರಕ್ಕೆ ತಿಳಿಸಿದಾಗ, ಸರ್ಕಾರದವರು ಹೊಸ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಬದಲು ಈಗ ಕೈಕೊಂಡಿರುವ 60ಕಟ್ಟಡಗಳನ್ನು ಜಾಗ್ರತೆ ಮುಗಿಸಲು 16 ಲಕ್ಷ ರೂಪಾಯಿಗಳನ್ನು 4-5 ತಿಂಗಳುಗಳ ಹಿಂದೆ ಮಂಜೂರು ಮಾಡಿ ಕಳುಹಿಸಿದ್ದೇವೆ. ಮಾರ್ಚಿ 31ರೊಳಗೆ ಶೇಕಡಾ 99 ಭಾಗದಷ್ಟು ಕೆಲಸ ಪೂರ್ತಿಯಾಗುವ ನಿರೀಕ್ಷೆ ಸರ್ಕಾರಕ್ಕೆ ಇದೆ.

Limit on consumption of Petrol

19. SRI PRABHAKAR TELKAR (Kalagi).—

Will the Chief Minister be pleased to state:—

(*a*) whether Government have fixed any specific limit on the consumption of petrol in respect of the Official vehicles used by the Ministers and their personal staff;

(*b*) if so, the details thereof?

SRI D. DEVARAJ URS. (Chief Minister).—

(*a*) No,

(*b*) Does not arise.

SRI PRABHAKAR TELKAR —In view of answer to (a), does it mean that the Ministers can spend on petrol as they like or is there any restriction placed?